ಸಾಕ್ಷಿಯನ್ನು ದಿ: 06.03.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನನ್ನ ತಾತ ಸಿದ್ದರಾಮೇಗೌಡನಿಗೆ ಒಬ್ಬಳೇ ಹೆಂಡತಿಯಿದ್ದಳು ಅವಳ ಹೆಸರು ಚೆನ್ನಮ್ಮ. ನನ್ನ ಅಜ್ಜಿ ಚನ್ನಮ್ಮನನ್ನು ನಾನು ನೋಡಿದ್ದೇನೆ. ನನ್ನ ಅಜ್ಜಿ ಮೂಲತಃ ಕೇತುಪುರ ಗ್ರಾಮದವರು. ನನ್ನ ತಾತನಿಗೆ ತಾಯಮ್ಮ ಎಂಬ ಇನ್ನೊಬ್ಬ ಹೆಂಡತಿಯಿದ್ದಳು ಎಂದರೆ ಸರಿಯಲ್ಲ. ಸದರಿ ತಾಯಮ್ಮನಿಗೆ ರತ್ನಮ್ಮ ಎಂಬ ಮಗಳಿದ್ದಾಳೆಂದರೆ ಸರಿಯಲ್ಲ. ಸದರಿ ರತ್ನಮ್ಮನನ್ನು ಕೇತುಪುರದ ರಾಜೇಗೌಡನಿಗೆ ಮದುವೆಯಾಗಿರುತ್ತಾಳೆಂದರೆ ಸರಿಯಲ್ಲ. ಕೇತುಪುರದಲ್ಲಿ ನನ್ನ ತಂದೆಗೆ 20 ಗುಂಟೆ ಜಮೀನು ಮತ್ತು ಒಂದು ಮನೆಯಿರುತ್ತದೆ. ಸಾಕ್ಷಿ ಮುಂದುವರೆದು ನನ್ನ ತಾತ ಒಂದು ನಿವೇಶನ ಖರೀದಿ ಮಾಡಿದ್ದರು ಆದರೆ ಅವರೇ ಅದನ್ನು ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾತ ಯಾರಿಂದ ಸದರಿ ನಿವೇಶನ ಖರೀದಿ ಮಾಡಿರುತ್ತಾರೆಂದು ಗೊತ್ತಿಲ್ಲ. ಸದರಿ ಕ್ರಯಪತ್ರ ನೋಡಿಲ್ಲ. ನನ್ನ ತಾತ ಮಾರಾಟ ಮಾಡಿದ ಆಸ್ತಿಯು ಅವರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕೇತುಪುರದಲ್ಲಿರುವ ಮನೆಯ ನಂಬರ್ ಗೊತ್ತಿಲ್ಲ. ಸದರಿ ಮನೆ ಕಲ್ನಾರ್ ಶೀಟಿನ ಮನೆಯಾಗಿರುತ್ತದೆ. ಸದರಿ ಮನೆಯ ವಿಸ್ತೀರ್ಣ ಗೊತ್ತಿಲ್ಲ, ನನ್ನ ತಂದೆ ಈಗ ಸದರಿ ಮನೆಯಲ್ಲೇ ವಾಸ ಮಾಡುತ್ತಿದ್ದಾರೆ. ಸದರಿ ಮನೆ ನನ್ನ ತಂದೆ ಹೆಸರಿಗೆ ಇರುತ್ತದೆ. ಸದರಿ ಮನೆ ನನ್ನ ತಾತನಿಂದ ನನ್ನ ತಂದೆಗೆ ಬಂದಿರುತ್ತದೆ. ನಮ್ಮ ತಾತ ನನ್ನ ತಂದೆಯ ಸಹೋದರಿಯರಿಗೂ ಸಹ ವಿಭಾಗದಲ್ಲಿ ಆಸ್ತಿ ಕೊಟ್ಟಿರುತ್ತಾರೆ. ನಿಪಿ.7 ರ ಆಸ್ತಿ 20 ಗುಂಟೆ ಇರುತ್ತದೆ. ಸರಸ್ವತಿಗೆ ಬಸಾಪುರದಲ್ಲಿ ಜಮೀನು ಕೊಟ್ಟಿರುತ್ತಾರೆ. ಸರಸ್ವತಿಗೆ ಕೊಟ್ಟ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಸರಸ್ವತಿಗೆ ಕೊಟ್ಟ ಜಮೀನು ನನ್ನ ತಾತನಿಗೆ ಪಿತ್ರಾರ್ಜಿತವಾಗಿ ಬಂದಿತ್ತು. ಸರಸ್ವತಿಗೆ ಎಷ್ಟು ಗುಂಟೆ ಕೊಡಲಾಗಿದೆ ಎಂದು ಗೊತ್ತಿಲ್ಲ. ನಿಪಿ.7 ರ ಆಸ್ತಿ ನನ್ನ ತಾತನಿಗೆ ಹೇಗೆ ಬಂದಿರುತ್ತದೆ ಗೊತ್ತಿಲ್ಲ. ಸರ್ವೆ ನಂ.186 ರಲ್ಲಿ ನನ್ನ ತಾತ ನಾರಾಯಣ ಬಿನ್ ರಂಗೇಗೌಡನಿಗೆ 20 ಗುಂಟೆ ಒಂದು ಸಾರಿ ಮತ್ತು 21 ಗುಂಟೆ ಒಂದು ಸಾರಿ ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ನಾರಾಯಣನಿಗೆ ಮಾರಾಟ ಮಾಡಿದ ಜಮೀನಿನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ನಾರಾಯಣನಿಗೆ ಮಾರಾಟ ಮಾಡಿದ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆಯಿರಲಿಲ್ಲ. ನನ್ನ

ತಂದೆ ದಾವಾ ಐಟಂ ನಂ.1 ರ ಆಸ್ತಿಯನ್ನು 3 ನೇ ಪ್ರತಿವಾದಿಗೆ ಯಾವಾಗ ಮಾರಾಟ ಮಾಡಿರುತ್ತಾರೆ ಗೊತ್ತಿಲ್ಲ. ದಾವಾ ಐಟಂ ನಂ.1 ವ್ಯವಸಾಯದ ಜಮೀನಾಗಿರುತ್ತದೆ. ದಾವಾ ಐಟಂ ನಂ.1 ರಲ್ಲಿ 3 ನೇ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆಂದರೆ ಗೊತ್ತಿಲ್ಲ. ದಾವಾ ಐಟಂ ನಂ.1 ರಲ್ಲಿ 3 ನೇ ಪ್ರತಿವಾದಿ ಬಸವ ವಸತಿ ಯೋಜನೆಯಡಿ ಸಾಲ ಪಡೆದು ಮನೆಯನ್ನು ಸಹ ಕಟ್ಟಿರುತ್ತಾರೆಂದರೆ ಗೊತ್ತಿಲ್ಲ. ನಾನು ದ್ವಿತಿಯ ಪಿ.ಯು.ಸಿ ರವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಹುಟ್ಟಿದ ದಿನಾಂಕ ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ. 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಲಪಟಾಯಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.3 ನ್ನು ನನ್ನ ತಂದೆ ತಾಯಿ 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ. ನಿಪಿ.3 ಕ್ಕೆ ನನ್ನ ತಾತನೂ ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ